‘ನಿಂಗೇನಾರು ತಲೆ ಕೆಟ್ಟಿದ್ಯ? ಅವಳನ್ನು ಇಟ್ಕೊ ಕಟ್ಕೋಬೇಡ ಅಂತಿದೀಯ ನೀನು’ ಎಂದೆ ಕನಲಿ. ಒಂದಿಷ್ಟೂ ಸಂಯಮ ಕಳಕೊಳ್ಳದೆ, ‘ನೋಡಿ ನಂಗೆ ಇವೆಲ್ಲ ಏನೂ ಬೇಕೂ ಅಂತ ಅನ್ನಿಸಲ್ಲ, ನಿಮ್ಮ ಸಂಸಾರಕ್ಕೆ ನಾನು ಯಾವತ್ತೂ ಇಂಟರ್‌ಫಿಯರ್ ಆಗಲ್ಲ. ಅವಳಿಗೂ ತಾಳಿಕಟ್ಟಿ ಬೇಡಾಂತಿಲ್ಲ’ ಅಂದಳು.

‘ಏನು ನಿಂಗೇನೂ ಬೇಕಾಗಿಲ್ಲ ಅಂದ್ರೆ ಏನರ್ಥ’ ಅಂದೆ ಕಿನಿಸಿನಿಂದ. ನಿಧಾನ ದನಿಯಲ್ಲಿ ತಡೆತಡೆದು ಹೇಳಿದಳು. ‘ನಂಗೆ ನನ್ನ ಬೆಡ್ಡಲ್ಲಿ ಒಂದು ಸೊಳ್ಳೆ ನೊಣ ಇದ್ರೂ ನಿದ್ದೆ ಬರಲ್ಲ. ಇನ್ನು ಒಬ್ಬ ಮನುಷ್ಯ... ಅದರಲ್ಲೂ ಗಂಡಸು... ನೋ ವೇ! ನಿಮಗೆ ಹೆಂಗೆ ಹೇಳಲಿ? ಈ ಸೆಕ್ಸ್, ಮದುವೆ ಯಾವುದೂ ಇಂಟ್ರೆಸ್ಟ್ ಇಲ್ಲ. ನೀವು ನನ್ನ ಕೇಳಿದಾಗ ಆಗಲೇ ಇಲ್ಲ ಅಂತ ಹೇಳಬೇಕಿತ್ತು. ಏನೋ ನಾನು ಸರಿಹೋಗಬಹುದು ಅಂತ ಒಪ್ಪಿಕೊಂಡೆ. ಊಹೂಂ... ಏನೂ ಇಂಪ್ರೂವ್‌ಮೆಂಟಿಲ್ಲ. ಅವೆಲ್ಲ ಏನೂ ಯಾವತ್ತೂ ಅನ್ನಿಸೊಲ್ಲ. ನನ್ನ ಬಗ್ಗೆ ತಲೆಕೆಡಿಸ್ಕೋಬೇಡಿ. ನನ್ನ ತಂಗೀನೇ ಮಾಡ್ಕೊಂಡು ಸುಖವಾಗಿರಿ. ಆದ್ರೆ ಒಂದು ಪೆನಾಲ್ಟಿ... ನಂಗೂ ತಾಳಿಕಟ್ಟಬೇಕು. ನಿಮಿಬ್ಬರ ಬದುಕಿಗೆ ನಾನು ತೊಂದ್ರೆ ಮಾಡಲ್ಲ. ಹಂಗೂ ನೀವು ಇನ್‌ಸೆಕ್ಯೂರ್ ಆದ್ರೆ ಅವಳನ್ನ ರಿಜಿಸ್ಟರ್ ಮದ್ವೆ ಮಾಡ್ಕೊಳಿ. ಎಲ್ಲ ಹೀಗೇ

